★★★

ಇದಾದ ಆರೇ ತಿಂಗಳಲ್ಲಿ ಅವನಿಗೆ ಕೊರೊನಾ ವೈರಸ್ಸಿನ ಸೋಂಕು ತಗುಲಿದೆ ಎನ್ನುವ ಸುದ್ದಿ ಹರಡಿತ್ತು. ಅದನ್ನು ಕೇಳಿದ ನನಗೆ ಆಘಾತವಾಯ್ತು. ತನ್ನದೇ ಒಂದು ಆಸ್ಪತ್ರೆಯಲ್ಲಿ ರೋಗಿಯಾಗಿ ದಾಖಲಾಗಿದ್ದ ಈ ಶ್ರೀಮಂತನಿಗೆ ಉತ್ತಮ ಚಿಕಿತ್ಸೆ ದೊರಕಿರುತ್ತದೆ ಎನ್ನುವ ಬಗ್ಗೆ ನನಗೆ ಪೂರ್ತಿ ಖಾತರಿ ಇತ್ತು.

ವಿಡಿಯೊ ಲಿಂಕ್ ಮೂಲಕ ಕಳೆದ ವಾರವಷ್ಟೇ ಮೀಟಿಂಗ್ ಮಾಡಿದ್ದ ಅವನು ನಾವು ಎಷ್ಟು ದುಡಿಯಬೇಕು, ಯಾವ ಟಾರ್ಗೆಟ್‌ಗಳನ್ನು ಮುಟ್ಟಬೇಕು ಎಂದು ನೆನಪಿಸಿದ್ದ. ನಮ್ಮ ಆಸ್ಪತ್ರೆಯ ಹಣದ ವಹಿವಾಟು ಮತ್ತು ನಮ್ಮ ವೈಯಕ್ತಿಕ ದುಡಿಮೆಯಲ್ಲಿದ್ದ ಕೊರತೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಸೂಚಿಸಿ ಇನ್ನಷ್ಟು ದುಡಿದು ನಮ್ಮ ವೈಯಕ್ತಿಕ ಲಾಭಗಳನ್ನು ಹೆಚ್ಚಿಸಿಕೊಳ್ಳಿರೆಂದು ಪರೋಕ್ಷವಾಗಿ ತಿಳಿಸಿದ್ದ. ಅಂತಹವನು ಇದ್ದಕ್ಕಿದ್ದಂತೆ ಆಸ್ಪತ್ರೆ ಸೇರಿದ್ದನ್ನು ಕೇಳಿ ಅರೆಗಳಿಗೆ ಮನುಷ್ಯನ ಬದುಕಿನ ನಶ್ವರತೆಯನ್ನು ನೆನೆದು ವಿಷಾದವೆನಿಸಿದರೂ ವೈದ್ಯನ ಮನೋಭಾವದಲ್ಲಿ ಅದನ್ನು ಸ್ವೀಕರಿಸಿದೆ.

ಇದೀಗ ಅವನು ತನ್ನ ಫೇಸ್‌ಬುಕ್ಕಿನಲ್ಲಿ ಮತ್ತು ವಾಟ್ಸ್‌ಆ್ಯಪ್ ಗುಂಪಿನಲ್ಲಿ ತನ್ನ ಅನುಭವಗಳನ್ನು ಹಂಚಿಕೊಳ್ಳತೊಡಗಿದ್ದ. 'ಸೋಂಕಿನ ದಿನಗಳಲ್ಲಿ ಒಂದು ವಾಶಿಂಗ್ ಮಿಷನ್ನಿನಲ್ಲಿ ತನ್ನ ಜೀವ ಸಿಲುಕಿದಂತಹ ಅನುಭವ' ಆಯಿತೆಂದು ನೋವನ್ನು ತೋಡಿಕೊಂಡಿದ್ದ.

ಸಾವಿನ ಬಾಯಲ್ಲಿ ಸಿಲುಕಿರುವಾಗ ಅಧ್ಯಾತ್ಮ ಆತನನ್ನು ರಕ್ಷಿಸಿದ ಬಗ್ಗೆ ಉದ್ದುದ್ದ ಬರೆದುಕೊಂಡಿದ್ದ. ಗೀತೆಯನ್ನು ಓದಿ ಮನಸ್ಸಿಗೆ ಹಿತ ತಂದುಕೊಂಡದ್ದನ್ನು ಹೇಳಿದ್ದ. ಬಸವಣ್ಣ, ಬುದ್ಧರ ತತ್ತ್ವಗಳು ಬದುಕಿನಲ್ಲಿ ಧೈರ್ಯ ಹೆಚ್ಚಿಸಿದ್ದನ್ನು ಬರೆದು ಈಗ ತಾನೊಬ್ಬ ಹೊಸ ಮನುಷ್ಯನಾಗಿರುವ ಬಗ್ಗೆ ಹೇಳಿಕೊಂಡಿದ್ದ. ಯೋಗದ ದೀರ್ಘ ಉಚ್ಛ್ವಾಸ ನಿಶ್ವಾಸಗಳು ಅವನ ಉಸಿರನ್ನು ಮರಳಿಸಿದ ಬಗ್ಗೆ ಎಲ್ಲರಿಗೂ ಹೇಳಿ ಎಲ್ಲರೂ ದಿನವೂ ಅವುಗಳನ್ನು ಮಾಡಿ ಎಂದು ಕೈ ಮುಗಿದು ಕೇಳಿದ್ದ.

ಲಾಕ್‌ಡೌನ್ ಕಾರಣ ಅವನ ಸಾಮ್ರಾಜ್ಯದ ಒಟ್ಟಾರೆ ಗಳಿಕೆ ಎಲ್ಲರಂತೆ ಥಟ್ಟನೆ ಕುಸಿದಿತ್ತು. ಆದರೆ ಅವನು ಮಾತ್ರ ಎಲ್ಲಿಯೂ ಹಣ ಮತ್ತು ದುಡಿತದ ಬಗ್ಗೆ ಮಾತಾಡಿರಲಿಲ್ಲ. ನಷ್ಟ ಸಂಭವಿಸಿದರೆ ಭರಿಸುವ ಶಕ್ತಿ ಅವನಿಗಿತ್ತು ಎನ್ನಿ. ಆದರೂ ಹಣದ ಮಾತೇ ಇಲ್ಲದ ಅವನ ಸಂದೇಶಗಳು ನನಗೆ ಆಶ್ಚರ್ಯ ತರಿಸಿದವು.

ಇಡೀ ಪ್ರಪಂಚವೇ ಈ ಕೊರೊನಾ ವೈರಾಣುವಿನ ಕೈಯಲ್ಲಿ ನಲುಗಿ ಬದಲಾಗುತ್ತಿರುವಾಗ ವ್ಯಕ್ತಿಯೊಬ್ಬ ಬದಲಾಗಲು ಸಾಧ್ಯವಿಲ್ಲವೇ? ಅತ್ಯಂತ ಶ್ರೀಮಂತನೇ ಆದರೇನು? ಸಾವು ಮತ್ತು ಆರೋಗ್ಯದ ಭಯಗಳು ಎಂಥವರನ್ನೂ ಬದಲಾಯಿಸಿಬಿಡುತ್ತವಲ್ಲವೇ? ಈಗವನಿಗೆ ಹಣದ ಹೊರತಾದ ವಿಚಾರಗಳು ಮನದಟ್ಟಾಗಿರಬೇಕು ಎನ್ನಿಸಿತು. ಕೊರೊನಾದೊಂದಿಗೆ ಹಣದ ಪೆಡಂಭೂತವೂ ಮೆಟ್ಟಿಕೊಂಡಿದ್ದ ಅವನು ಎರಡರಿಂದಲೂ ಗುಣಮುಖನಾಗಿರಬಹುದೇನೋ ಎಂದುಕೊಂಡೆ.

ಅವನು ಎರಡು ವಾರ ಆಸ್ಪತ್ರೆಯಲ್ಲಿ ಕೊರೊನಾ ಸೋಂಕಿನ ವಿರುದ್ಧ ಹೋರಾಡಿ ನಿನ್ನೆಯಷ್ಟೇ ಮನೆಗೆ ಹಿಂತಿರುಗಿದ್ದ. ಅವನಿಗೆ ಎಲ್ಲರೂ ಗುಣಮುಖನಾಗಿದ್ದಕ್ಕಾಗಿ ಅಭಿನಂದನೆಗಳನ್ನು ಕಳಿಸುತ್ತಿದ್ದರು.

ವೈದ್ಯನಾಗಿ ಒಂದು ವಿಚಾರ ನನಗೆ ಮನದಟ್ಟಾಗಿತ್ತು. ಎಂತಹ ನೋವನ್ನೂ ನಿವಾರಿಸಿ, ಜೀವ ಉಳಿಸಿ ಕಳಿಸಿದರೂ, ರೋಗಿಯೋರ್ವ ವೈದ್ಯನಿಗೆ ಋಣಿಯಾಗಿದ್ದು ತಾನೂ ಇತರರಿಗೆ ಏನನ್ನಾದರೂ ಮಾಡಬೇಕೆನ್ನಿಸುವುದು ಸಾಮಾನ್ಯವಾಗಿ ಚಿಕಿತ್ಸೆ ಮುಗಿದ ಬರೇ ಏಳು ದಿನಗಳು ಮಾತ್ರವಂತೆ. ಇಪ್ಪತ್ತೆರಡು ದಿನಗಳ ಕಾಲ ಅಲ್ಪ ಸ್ವಲ್ಪ ಅದರ ಪರಿವೆಯಿದ್ದರೂ ಆ ನಂತರ ಒಂದು ಸಣ್ಣ ಧನ್ಯವಾದದ